Re · No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
Published by Authority
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. | नई दिल्ली, सोमवार, सेप्टेंबर 03, 2001 | भाद्रपदा 12, 1923 (शाक) | खंड. 18 |
| No. 1 | New Delhi, Monday, September 03, 2001 | Bhadrapada 12, 1923 (Saka) | Vol. 18 |
| ಸಂ. ೧ | ನವ ದೆಹಲಿ, ಸೋಮವಾರ, ಸೆಪ್ಟೆಂಬರ್ ೦೩, ೨೦೦೧ | ಭಾದ್ರಪದ ೧೨, ೧೯೨೩ (ಶಕ) | ಸಂಪುಟ. ೧೮ |


**Ministry of Law, Justice and Company Affairs**
(Legislative Department)
New Delhi, 29th January, 1999

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ
(ವಿಧಾಯೀ ಇಲಾಖೆ)
ನವದೆಹಲಿ, 29ನೇ ಜನವರಿ, 1999

The Translation in Kannada of the following Acts namely - (1) The Commission of Sati (Prevention) Act, 1987, (2) The Prisoners Act, 1900, (3) The Company Secretaries Act, 1980, (4) The Pharmacy Act, 1948, (5) The National Airports Authority Act, 1985, (6) The National Housing Bank Act, 1987 - are hereby published under the authority of the President and shall be deemed to be authoritative texts thereof in Kannada under clause (a) of Section 2 of The Authoritative Texts (Central laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ - (1) ಸತಿ ಹೋಗುವಿಕೆ (ಪ್ರತಿಬಂಧ) ಅಧಿನಿಯಮ, 1987, (2) ಬಂದಿಗಳ ಅಧಿನಿಯಮ, 1900, (3) ಕಂಪನಿ ಕಾರ್ಯದರ್ಶಿಗಳ ಅಧಿನಿಯಮ 1980, (4) ಔಷಧಗಾರಿಕೆ ಅಧಿನಿಯಮ, 1948 (5) ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1985, (6) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಅಧಿನಿಯಮ, 1987 - ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳ) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಸತಿ ಹೋಗುವಿಕೆ (ಪ್ರತಿಬಂಧ) ಅಧಿನಿಯಮ, 1987

(1988ರ ಸಂಖ್ಯೆ 3)

[3ನೇ ಜನವರಿ 1988]

ಸತಿ ಹೋಗುವಿಕೆಯನ್ನು ಮತ್ತು ಅದರ ಮಹತ್ವೀಕರಣವನ್ನು ಹೆಚ್ಚು ಪರಿಣಾಮಕಾರಿಯಾಗಿ ಪ್ರತಿಬಂಧಿಸುವುಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಸತಿ ಅಥವಾ ವಿಧವೆಯರನ್ನು ಅಥವಾ ಮಹಿಳೆಯರನ್ನು ಸಜೀವವಾಗಿ ಸುಡುವುದು ಅಥವಾ ಹೂಳುವುದು ಮನುಷ್ಯ ಸ್ವಭಾವದ ಭಾವನೆಗಳಿಗೆ ಅಸಹ್ಯಕರವಾಗಿರುವುದರಿಂದ ಮತ್ತು ಹೀಗೆ ಮಾಡುವುದು ಅತ್ಯಗತ್ಯ ಕರ್ತವ್ಯವೆಂದು ಭಾರತದ ಯಾವುದೇ ಧರ್ಮವು ಎಲ್ಲೂ ವಿಧಿಸಿಲ್ಲದೆ ಇರುವುದರಿಂದ;

ಮತ್ತು ಸತಿ ಹೋಗುವಿಕೆಯನ್ನು ಮತ್ತು ಅದರ ಮಹತ್ವೀಕರಣವನ್ನು ಪ್ರತಿಬಂಧಿಸಲು ಇನ್ನೂ ಹೆಚ್ಚು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಭಾಗ - I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಸತಿ ಹೋಗುವಿಕೆ (ಪ್ರತಿಬಂಧ) ಅಧಿನಿಯಮ, 1987 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಒಂದು ರಾಜ್ಯದಲ್ಲಿ ಜಾರಿಗೆ ಬರತಕ್ಕದ್ದು; ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.**- (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(ಎ) 'ಸಂಹಿತೆ' ಎಂದರೆ ದಂಡಪ್ರಕ್ರಿಯಾ ಸಂಹಿತೆ, 1973;

(ಬಿ) ಸತಿಗೆ ಸಂಬಂಧಪಟ್ಟಂತೆ 'ಮಹತ್ವೀಕರಣ' ಎಂಬುದು ಅಂಥ ಸತಿ ಹೋಗುವಿಕೆಯು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ ಆಗಿದ್ದಿದ್ದರೆ ಇತರ ಕಾರ್ಯಗಳೊಂದಿಗೆ,-

(i) ಸತಿ ಹೋಗುವಿಕೆಗೆ ಸಂಬಂಧಿಸಿದಂತೆ ಯಾವುದೇ ಕರ್ಮಾಚರಣೆಯನ್ನು ನಡೆಸುವುದು ಅಥವಾ ಮೆರವಣಿಗೆಯನ್ನು ಹೊರಡಿಸುವುದು; ಅಥವಾ

(ii) ಯಾವುದೇ ರೀತಿಯಲ್ಲಿ ಸತಿಯ ಆಚರಣೆಯನ್ನು ಬೆಂಬಲಿಸುವುದು, ಸಮರ್ಥಿಸುವುದು, ಅಥವಾ ಪ್ರಸಾರ ಮಾಡುವುದು; ಅಥವಾ

(iii) ಸತಿ ಹೋಗಿರುವ ವ್ಯಕ್ತಿಯನ್ನು ಪ್ರಶಂಸಿಸಲು ಯಾವುದೇ ಕಾರ್ಯಕ್ರಮವನ್ನು ಏರ್ಪಡಿಸುವುದು; ಅಥವಾ

(iv) ಸತಿ ಹೋಗಿರುವ ವ್ಯಕ್ತಿಯ ಘನತೆಯನ್ನು ಶಾಶ್ವತಗೊಳಿಸುವ ಅಥವಾ ಅವಳ ಸ್ಮರಣೆಯನ್ನು ಪರಿರಕ್ಷಿಸುವ ದೃಷ್ಟಿಯಿಂದ ನ್ಯಾಸವನ್ನು ಸೃಜಿಸುವುದು ಅಥವಾ ನಿಧಿಗಳನ್ನು ಸಂಗ್ರಹಿಸುವುದು ಅಥವಾ ದೇವಸ್ಥಾನ ಅಥವಾ ಇತರ ನಿರ್ಮಿತಿಯ ನಿರ್ಮಾಣ ಅಥವಾ ಅದರಲ್ಲಿ ಯಾವುದೇ ಸ್ವರೂಪದ ಆರಾಧನೆಯನ್ನು ನಡೆಸುವುದು ಅಥವಾ ಯಾವುದೇ ಕರ್ಮಾಚರಣೆಯನ್ನು ನೆರವೇರಿಸುವುದು

- ಇವುಗಳನ್ನು ಒಳಗೊಳ್ಳುತ್ತದೆ;

(ಸಿ) "ಸತಿ" ಎಂದರೆ,-

(i) ಯಾರೇ ವಿಧವೆಯ ಮೃತಗಂಡನ ಅಥವಾ ಯಾರೇ ಇತರ ಸಂಬಂಧಿಯ ಶರೀರದೊಂದಿಗೆ ಅಥವಾ ಆ ಗಂಡನಿಗೆ ಅಥವಾ ಅಂಥ ಸಂಬಂಧಿಗೆ ಸೇರಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನಿನೊಂದಿಗೆ ಆ ವಿಧವೆಯನ್ನು; ಅಥವಾ

(ii) ಸುಡುವಿಕೆ ಅಥವಾ ಹೂಳುವಿಕೆಯು ಸ್ವಇಚ್ಛೆಯದಾಗಿದೆ ಎಂದು ಆ ವಿಧವೆಯು ಅಥವಾ ಮಹಿಳೆಯು ಕ್ಲೇಮು ಮಾಡಿದ್ದಾಗ್ಯೂ ಅಥವಾ ಅನ್ಯಥಾ, ಯಾರೇ ಮಹಿಳೆಯನ್ನು ಅವಳ ಯಾರೇ ಸಂಬಂಧಿಯ ಶರೀರದೊಂದಿಗೆ

- ಸಜೀವವಾಗಿ ಸುಡುವ ಅಥವಾ ಹೂಳುವ ಕಾರ್ಯ;

(ಡಿ) "ವಿಶೇಷ ನ್ಯಾಯಾಲಯ" ಎಂದರೆ, 9ನೇ ಪ್ರಕರಣದ ಮೇರೆಗೆ ರಚಿಸಿದ ವಿಶೇಷ ನ್ಯಾಯಾಲಯ;

(ಇ) "ದೇವಸ್ಥಾನ" ಎಂಬುದು ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಸತಿ ಹೋಗಲಾಗಿದೆಯೋ, ಆ ವ್ಯಕ್ತಿಯ ಸ್ಮರಣೆಯನ್ನು ಪರಿರಕ್ಷಿಸಲು ನಿರ್ಮಿಸಿದ ಅಥವಾ ಮಾಡಿದ ಅಥವಾ ಹಾಗೆ ಸತಿ ಹೋದುದಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಆರಾಧನೆಯನ್ನು ನಡೆಸುವುದಕ್ಕಾಗಿ ಅಥವಾ ಯಾವುದೇ ಕರ್ಮಾಚರಣೆಯನ್ನು ನಡೆಸುವುದಕ್ಕಾಗಿ ಉಪಯೋಗಿಸಿದ ಅಥವಾ ಉಪಯೋಗಿಸಬೇಕೆಂದು ಉದ್ದೇಶಿಸಿದ ಮೇಲ್ಛಾವಣಿ ಹಾಕಿರುವ ಅಥವಾ ಹಾಕಿಲ್ಲದಿರುವ ಯಾವುದೇ ಕಟ್ಟಡ ಅಥವಾ ಇತರ ನಿರ್ಮಿತಿಯನ್ನು ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಉಪಯೋಗಿಸಿದ, ಆದರೆ ಪರಿಭಾಷಿಸಿಲ್ಲದ ಮತ್ತು ಭಾರತ ದಂಡ ಸಂಹಿತೆಯಲ್ಲಿ ಅಥವಾ ಸಂಹಿತೆಯಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಭಾರತ ದಂಡ ಸಂಹಿತೆ ಅಥವಾ ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಭಾಗ- II

## ಸತಿಗೆ ಸಂಬಂಧಪಟ್ಟ ಅಪರಾಧಗಳಿಗಾಗಿ ದಂಡನೆಗಳು

**3. ಸತಿ ಹೋಗುವಿಕೆಗೆ ಪ್ರಯತ್ನ.-** ಭಾರತ ದಂಡ ಸಂಹಿತೆಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸತಿ ಹೋಗಲು ಪ್ರಯತ್ನಿಸುವ ಮತ್ತು ಅಂಥ ಹೋಗುವಿಕೆಗೆ ಸಂಬಂಧಪಟ್ಟ ಯಾವುದೇ ಕಾರ್ಯವನ್ನು ಮಾಡುವ ಯಾರೇ ಆಗಲಿ ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯರಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಅಪರಾಧವನ್ನು ಅಧಿವಿಚಾರಣೆ ಮಾಡುವ ವಿಶೇಷ ನ್ಯಾಯಾಲಯವು, ಯಾರೇ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸುವುದಕ್ಕೆ ಮುಂಚೆ, ಆ ಅಪರಾಧವನ್ನು ಮಾಡುವುದಕ್ಕಾಗಿ ಇದ್ದ ಸಂದರ್ಭಗಳು, ಮಾಡಿದ ಕಾರ್ಯ, ಆ ಕಾರ್ಯವನ್ನು ಮಾಡಿದ ಕಾಲದಲ್ಲಿ ಅಪರಾಧದ ಬಗ್ಗೆ ಆರೋಪಿತನಾದ ವ್ಯಕ್ತಿಯ ಮನಸ್ಸಿನ ಸ್ಥಿತಿ ಮತ್ತು ಸಂಬಂಧಪಟ್ಟ ಇತರ ಎಲ್ಲಾ ಅಂಶಗಳನ್ನು ಪರ್ಯಾಲೋಚಿಸತಕ್ಕದ್ದು.

**4. ಸತಿಹೋಗಲು ದುಷ್ಪ್ರೇರಣೆ.-** (1) ಭಾರತ ದಂಡ ಸಂಹಿತೆ (1860ರ 45)ಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾರೇ ವ್ಯಕ್ತಿಯು ಸತಿ ಹೋದರೆ, ಅಂಥ ಸತಿ ಹೋಗುವಿಕೆಯನ್ನು ಪ್ರತ್ಯಕ್ಷವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ದುಷ್ಪ್ರೇರಿಸುವ ಯಾರೇ ಆಗಲಿ, ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯರಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು ಸತಿಹೋಗಲು ಪ್ರಯತ್ನಿಸಿದರೆ, ಅಂಥ ಪ್ರಯತ್ನವನ್ನು ಪ್ರತ್ಯಕ್ಷವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲೀ ದುಷ್ಪ್ರೇರಿಸುವ ಯಾರೇ ಆಗಲಿ ಆಜೀವ ಕಾರಾವಾಸದಿಂದ ದಂಡನೀಯರಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ, ಈ ಕೆಳಕಂಡ ಯಾವುದೇ ಕಾರ್ಯವನ್ನು ಅಥವಾ ಅಂತಹುದನ್ನು ಸಹ ದುಷ್ಪ್ರೇರಣೆಯೆಂದು ಭಾವಿಸತಕ್ಕದ್ದು, ಎಂದರೆ:-

(ಎ) ವಿಧವೆ ಅಥವಾ ಮಹಿಳೆಯು ಯುಕ್ತ ಮಾನಸಿಕ ಸ್ಥಿತಿಯಲ್ಲಿದ್ದಾಗ್ಯೂ ಅಥವಾ ಮತ್ತಿನ ಅಥವಾ ಮಂಕುಗೊಂಡ ಸ್ಥಿತಿಯಲ್ಲಿದ್ದಾಗ್ಯೂ ಅಥವಾ ಅವಳ ಸ್ವಇಚ್ಛೆಯನ್ನು ವ್ಯಕ್ತಪಡಿಸಲು ಅಡ್ಡಿಯಾಗಿರುವ ಇತರ ಕಾರಣದಿಂದ ಬಳಲುತ್ತಿದ್ದಾಗಾಗಲೀ ಅವಳ ಮೃತ ಗಂಡ ಅಥವಾ ಯಾರೇ ಇತರ ಸಂಬಂಧಿಯ ಶರೀರದೊಂದಿಗೆ ಅಥವಾ ಗಂಡನಿಗೆ ಅಥವಾ ಅಂಥ ಸಂಬಂಧಿಗೆ ಸೇರಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನಿನೊಂದಿಗೆ ಅವಳನ್ನು ಸಜೀವವಾಗಿ ಸುಡಲು ಅಥವಾ ಹೂಳಲು ಅಂಥ ವಿಧವೆಯ ಅಥವಾ ಮಹಿಳೆಯ ಮನವೊಲಿಸುವುದು;

(ಬಿ) ಸತಿ ಹೋಗುವಿಕೆಯು ವಿಧವೆ ಅಥವಾ ಮಹಿಳೆ ಅಥವಾ ಅವಳ ಮೃತಗಂಡ ಅಥವಾ ಸಂಬಂಧಿಗೆ ಅಥವಾ ಕುಟುಂಬದ ಸಾಮಾನ್ಯ ಒಳಿತಿಗೆ ಯಾವುದೇ ಅಧ್ಯಾತ್ಮಿಕ ಪ್ರಯೋಜನವನ್ನುಂಟು ಮಾಡುವುದೆಂದು ಆ ವಿಧವೆ ಅಥವಾ ಮಹಿಳೆಯನ್ನು ನಂಬಿಸುವುದು ;

(ಸಿ) ಸತಿ ಹೋಗಲು ವಿಧವೆ ಅಥವಾ ಮಹಿಳೆಯ ಸಂಕಲ್ಪವನ್ನು ನಿಶ್ಚಿತಗೊಳ್ಳುವಂತೆ ಅವಳನ್ನು ಉತ್ತೇಜಿಸುವುದು ಮತ್ತು ಹಾಗೆ ಸತಿ ಹೋಗಲು ಅವಳನ್ನು ಪ್ರಚೋದಿಸುವುದು;

(ಡಿ) ಸತಿ ಹೋಗುವಿಕೆಗೆ ಸಂಬಂಧಿಸಿದ ಯಾವುದೇ ಮೆರವಣಿಗೆಯಲ್ಲಿ ಭಾಗವಹಿಸುವುದು ಅಥವಾ ವಿಧವೆ ಅಥವಾ ಮಹಿಳೆಯನ್ನು ಸುಡುಗಾಡು ಅಥವಾ ಸ್ಮಶಾನಕ್ಕೆ ಅವಳ ಮೃತಗಂಡ ಅಥವಾ ಸಂಬಂಧಿಯ ಶರೀರದೊಂದಿಗೆ ಕರೆದುಕೊಂಡು ಹೋಗುವ ಮೂಲಕ ಸತಿ ಹೋಗುವ ಬಗ್ಗೆ ಅವಳ ತೀರ್ಮಾನದಲ್ಲಿ ಆ ವಿಧವೆ ಮತ್ತು ಮಹಿಳೆಗೆ ನೆರವು ನೀಡುವುದು;

(ಇ) ಅಂಥ ಸತಿ ಹೋಗುವ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಧರ್ಮಾಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸತಿ ಹೋಗುವ ಸ್ಥಳದಲ್ಲಿ ಹಾಜರಿರುವುದು;

(ಎಫ್) ವಿಧವೆ ಅಥವಾ ಮಹಿಳೆಯು, ತನ್ನನ್ನು ಸಜೀವವಾಗಿ ಸುಡುವುದರಿಂದ ಅಥವಾ ಹೂಳುವುದರಿಂದ ಪಾರಾಗುವುದನ್ನು ತಡೆಯುವುದು ಅಥವಾ ಅಡ್ಡಿಪಡಿಸುವುದು;

(ಜಿ) ಸತಿ ಹೋಗುವಿಕೆಯನ್ನು ಪ್ರತಿಬಂಧಿಸಲು ಯಾವುವೇ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಪೊಲೀಸರ ಕರ್ತವ್ಯಗಳ ನಿರ್ವಹಣೆಯಲ್ಲಿ ಅವರನ್ನು ಅಡ್ಡಿಪಡಿಸುವುದು ಅಥವಾ ಅವರ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುವುದು.

**5. ಸತಿಯ ಮಹತ್ವೀಕರಣಕ್ಕಾಗಿ ದಂಡನೆ.**– ಸತಿಯ ಮಹತ್ವೀಕರಣಕ್ಕಾಗಿ ಯಾವುದೇ ಕಾರ್ಯ ಮಾಡುವ ಯಾರೇ ಆಗಲಿ, ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ, ಆದರೆ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯರಾಗತಕ್ಕದ್ದು.

## ಭಾಗ– III

### ಸತಿಗೆ ಸಂಬಂಧಪಟ್ಟ ಅಪರಾಧಗಳನ್ನು ಪ್ರತಿಬಂಧಿಸಲು ಕಲೆಕ್ಟರನ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರಗಳು

**6. ಕೆಲವು ಕಾರ್ಯಗಳನ್ನು ನಿಷೇಧಿಸಲು ಅಧಿಕಾರ.**– (1) ಕಲೆಕ್ಟರನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು, ಸತಿ ಅಥವಾ ಅದರ ಯಾವುದೇ ದುಷ್ಪ್ರೇರಣೆಯನ್ನು ಮಾಡಲಾಗುತ್ತದೆ ಅಥವಾ ಇನ್ನೇನು ಮಾಡುವುದರಲ್ಲಿದೆ ಎಂದು ಅಭಿಪ್ರಾಯಪಡುವಲ್ಲಿ, ಅವನು, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶ ಅಥವಾ ಪ್ರದೇಶಗಳಲ್ಲಿ ಯಾರೇ ವ್ಯಕ್ತಿಯು ಸತಿ ಹೋಗುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರ್ಯವನ್ನು ಮಾಡುವುದನ್ನು ನಿಷೇಧಿಸಬಹುದು.

(2) ಕಲೆಕ್ಟರನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಅಥವಾ ಪ್ರದೇಶಗಳಲ್ಲಿ ಯಾರೇ ವ್ಯಕ್ತಿಯು ಯಾವುದೇ ರೀತಿಯಲ್ಲಿ ಸತಿಯ ಮಹತ್ವೀಕರಣ ಮಾಡುವುದನ್ನು ಕೂಡ ನಿಷೇಧಿಸಬಹುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸುವ ಯಾರೇ ಆಗಲಿ, ಅಂಥ ಉಲ್ಲಂಘನೆಯು ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಮೇರೆಗೆ ದಂಡನೀಯವಾಗಿಲ್ಲದಿದ್ದರೆ, ಒಂದು ವರ್ಷಕ್ಕಿಂತ ಕಡಿಮೆಯಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯರಾಗತಕ್ಕದ್ದು.

**7. ಕೆಲವು ದೇವಸ್ಥಾನಗಳು ಅಥವಾ ಇತರ ನಿರ್ಮಿತಿಗಳನ್ನು ತೆಗೆದುಹಾಕಲು ಅಧಿಕಾರ.**– (1) ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಸತಿ ಹೋಗಲಾಗಿದೆಯೋ ಆ ವ್ಯಕ್ತಿಯ ಘನತೆಯನ್ನು ಇಪ್ಪತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ಕಾಲದಿಂದ ಅಸ್ತಿತ್ವದಲ್ಲಿರುವ ಯಾವುದೇ ದೇವಸ್ಥಾನದಲ್ಲಿ ಅಥವಾ ಇತರ ನಿರ್ಮಿತಿಯಲ್ಲಿ, ಶಾಶ್ವತಗೊಳಿಸುವ ಅಥವಾ ಅವನ ಸ್ಮರಣೆಯನ್ನು ಪರಿರಕ್ಷಿಸುವ ದೃಷ್ಟಿಯಿಂದ ಯಾವುದೇ ಸ್ವರೂಪದ ಆರಾಧನೆಯನ್ನು ಅಥವಾ ಯಾವುದೇ ಕರ್ಮಾಚರಣೆಯನ್ನು ನಡೆಸಲಾಗುತ್ತಿದೆ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಆದೇಶದ ಮೂಲಕ, ಅಂಥ ದೇವಸ್ಥಾನ ಅಥವಾ ಇತರ ನಿರ್ಮಿತಿಯನ್ನು ತೆಗೆದು ಹಾಕಲು ನಿರ್ದೇಶಿಸಬಹುದು.

(2) ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಸತಿ ಹೋಗಲಾಗಿದೆಯೋ ಆ ವ್ಯಕ್ತಿಯ ಘನತೆಯನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದುದನ್ನು ಹೊರತುಪಡಿಸಿ, ಇತರ ಯಾವುದೇ ದೇವಸ್ಥಾನ ಅಥವಾ ಇತರ ನಿರ್ಮಿತಿಯಲ್ಲಿ ಶಾಶ್ವತಗೊಳಿಸುವ ಅಥವಾ ಸ್ಮರಣೆಯನ್ನು ಪರಿರಕ್ಷಿಸುವ ದೃಷ್ಟಿಯಿಂದ ಯಾವುದೇ ಸ್ವರೂಪದ ಆರಾಧನೆಯನ್ನು ಅಥವಾ ಯಾವುದೇ ಕರ್ಮಾಚರಣೆಯನ್ನು ನಡೆಸಲಾಗುತ್ತಿದೆ ಎಂದು ಕಲೆಕ್ಟರ್ ಅಥವಾ ಜಿಲ್ಲಾ

ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಆದೇಶದ ಮೂಲಕ ಅಂಥ ದೇವಸ್ಥಾನವನ್ನು ಅಥವಾ ಇತರ ನಿರ್ಮಿತಿಯನ್ನು ತೆಗೆದು ಹಾಕುವಂತೆ ನಿರ್ದೇಶಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು ಪಾಲಿಸದಿದ್ದರೆ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಕಲೆಕ್ಟರ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು, ಆ ದೇವಸ್ಥಾನ ಅಥವಾ ಯಾವುದೇ ಇತರ ನಿರ್ಮಿತಿಯನ್ನು ಹಾಗೆ ತೆಗೆದು ಹಾಕಲು ತಪ್ಪಿದವನ ಖರ್ಚಿನಲ್ಲಿ ಸಬ್‌ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆಯಿಲ್ಲದ ಪೊಲೀಸು ಅಧಿಕಾರಿಯ ಮೂಲಕ ತೆಗೆದು ಹಾಕುವಂತೆ ಮಾಡಿಸತಕ್ಕದ್ದು.

**8. ಕೆಲವು ಸ್ವತ್ತುಗಳನ್ನು ಅಭಿಗ್ರಹಿಸುವ ಅಧಿಕಾರ.-** (1) ಕಲೆಕ್ಟರ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ, ಸತಿ ಹೋದುದರ ಯಾವುದೇ ಮಹತ್ವೀಕರಣದ ಉದ್ದೇಶಕ್ಕಾಗಿ ಯಾವುದೇ ನಿಧಿಗಳನ್ನು ಅಥವಾ ಸ್ವತ್ತನ್ನು ಸಂಗ್ರಹಿಸಲಾಗಿದೆ ಅಥವಾ ಆರ್ಜಿಸಲಾಗಿದೆ ಎಂದು ಅಥವಾ ಯಾವುದನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಮಾಡಿರುವ ಬಗ್ಗೆ ಸಂಶಯವನ್ನು ಹುಟ್ಟಿಸುವಂಥ ಸಂದರ್ಭಗಳಲ್ಲಿ ಕಂಡುಬರಬಹುದೋ ಅದನ್ನು ನಂಬಲು ಕಾರಣವಿರುವಲ್ಲಿ, ಅವನು ಅಂಥ ನಿಧಿಗಳು ಅಥವಾ ಸ್ವತ್ತನ್ನು ಅಭಿಗ್ರಹಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಕಾರ್ಯವನ್ನು ನಿರ್ವಹಿಸುತ್ತಿರುವ ಪ್ರತಿಯೊಬ್ಬ ಕಲೆಕ್ಟರು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಆ ಅಭಿಗ್ರಹಣವನ್ನು ಯಾವ ಅಪರಾಧಕ್ಕೆ ಸಂಬಂಧಪಟ್ಟಂತೆ ಅಂಥ ನಿಧಿಗಳನ್ನು ಅಥವಾ ಸ್ವತ್ತನ್ನು ಸಂಗ್ರಹಿಸಲಾಗಿತ್ತೋ ಅಥವಾ ಆರ್ಜಿಸಲಾಗಿತ್ತೋ ಆ ಯಾವುದೇ ಅಪರಾಧದ ಅಧಿವಿಚಾರಣೆ ಮಾಡಲು ಯಾವುದೇ ವಿಶೇಷ ನ್ಯಾಯಾಲಯವನ್ನು ರಚಿಸಿದ್ದರೆ ಅದಕ್ಕೆ ವರದಿ ಮಾಡತಕ್ಕದ್ದು. ಮತ್ತು ಅದರ ವಿಲೆ ಕುರಿತು ಅಂಥ ವಿಶೇಷ ನ್ಯಾಯಾಲಯದ ಆದೇಶಗಳನ್ನು ನಿರೀಕ್ಷಿಸತಕ್ಕದ್ದು.

## ಅಧ್ಯಾಯ- IV

## ವಿಶೇಷ ನ್ಯಾಯಾಲಯಗಳು

**9. ಈ ಅಧಿನಿಯಮದ ಮೇರೆಗಿನ ಅಪರಾಧಗಳ ಅಧಿವಿಚಾರಣೆ.-** (1) ಸಂಹಿತೆಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಎಲ್ಲಾ ಅಪರಾಧಗಳನ್ನು ಈ ಪ್ರಕರಣದ ಮೇರೆಗೆ ರಚಿಸಿದ ವಿಶೇಷ ನ್ಯಾಯಾಲಯವು ಮಾತ್ರ ಅಧಿವಿಚಾರಣೆ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗಿನ ಅಪರಾಧಗಳ ಅಧಿವಿಚಾರಣೆಗಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ವಿಶೇಷ ನ್ಯಾಯಾಲಯಗಳನ್ನು ರಚಿಸತಕ್ಕದ್ದು ಮತ್ತು ಪ್ರತಿಯೊಂದು ವಿಶೇಷ ನ್ಯಾಯಾಲಯವು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇಡೀ ರಾಜ್ಯ ಅಥವಾ ಅದರ ಅಂಥ ಭಾಗಕ್ಕೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕದ್ದು.

(3) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನ ಸಹಮತದೊಂದಿಗೆ ರಾಜ್ಯ ಸರ್ಕಾರವು ನೇಮಕ ಮಾಡಬೇಕಾದ ನ್ಯಾಯಾಧೀಶನು ವಿಶೇಷ ನ್ಯಾಯಾಲಯದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಒಬ್ಬ ವ್ಯಕ್ತಿಯು ವಿಶೇಷ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಬೇಕಾದರೆ ಅವನು ಅಂಥ ನೇಮಕಾತಿಗೆ ನಿಕಟಪೂರ್ವದಲ್ಲಿ ಯಾವುದೇ ರಾಜ್ಯದಲ್ಲಿ ಸೆಷನ್ಸ್ ನ್ಯಾಯಾಧೀಶ ಅಥವಾ ಅಡಿಷನಲ್ ಸೆಷನ್ಸ್ ನ್ಯಾಯಾಧೀಶನಾಗಿರುವ ಹೊರತು ಅರ್ಹನಾಗಿರತಕ್ಕದ್ದಲ್ಲ.

**10. ವಿಶೇಷ ಸರ್ಕಾರಿ ಪ್ರಾಸಿಕ್ಯೂಟರುಗಳು.-** (1) ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕೆ ರಾಜ್ಯ ಸರ್ಕಾರವು ವಿಶೇಷ ಸರ್ಕಾರಿ ಪ್ರಾಸಿಕ್ಯೂಟರನಾಗಿರಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು.

(2) ಒಬ್ಬ ವ್ಯಕ್ತಿಯು, ಏಳು ವರ್ಷಗಳಿಗೆ ಕಡಿಮೆಯಿಲ್ಲದಂತೆ ನ್ಯಾಯವಾದಿಯಾಗಿ ವೃತ್ತಿಯನ್ನು ನಡೆಸಿದ್ದರೆ ಅಥವಾ ಕಾನೂನಿನ ವಿಶೇಷ ಜ್ಞಾನವನ್ನು ಅಗತ್ಯಪಡಿಸುವ ರಾಜ್ಯದ ಅಧೀನದಲ್ಲಿ ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಯಾವುದೇ ಹುದ್ದೆಯನ್ನು ಧಾರಣ ಮಾಡಿದ್ದರೆ ಮಾತ್ರ ಈ ಪ್ರಕರಣದ ಮೇರೆಗೆ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ಸಂಹಿತೆಯ 2ನೇ ಪ್ರಕರಣದ (ಡಿ) ಖಂಡದ ಅರ್ಥ ವ್ಯಾಪ್ತಿಯೊಳಗೆ ಸರ್ಕಾರಿ ಪ್ರಾಸಿಕ್ಯೂಟರನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಆ ಸಂಹಿತೆಯ ಉಪಬಂಧಗಳು ತದನುಸಾರವಾಗಿ ಪರಿಣಾಮವನ್ನು ಹೊಂದಿರತಕ್ಕದ್ದು.

**11. ವಿಶೇಷ ನ್ಯಾಯಾಲಯಗಳ ಪ್ರಕ್ರಿಯೆ ಮತ್ತು ಅಧಿಕಾರಗಳು.-** (1) ಒಂದು ವಿಶೇಷ ನ್ಯಾಯಾಲಯವು, ಯಾವುದೇ ಅಪರಾಧದ ಬಗ್ಗೆ ಆಪಾದಿತನನ್ನು ಅಧಿವಿಚಾರಣೆಗಾಗಿ ತನಗೆ ಒಪ್ಪಿಸಿಲ್ಲದೆ ಇದ್ದಾಗ್ಯೂ, ಅಂಥ ಅಪರಾಧವನ್ನು ಆಗಿಸುವಂಥ ಸಂಗತಿಗಳ ಬಗ್ಗೆ ಫಿರ್ಯಾದನ್ನು ಸ್ವೀಕರಿಸಿದ ಮೇಲೆ ಅಥವಾ ಅಂಥ ಸಂಗತಿಗಳ ಬಗ್ಗೆ ಪೊಲೀಸು ವರದಿಯ ಮೇಲೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು.

(2) ಈ ಅಧಿನಿಯಮದ ಇತರ ಉಪಬಂಧರಗಳಿಗೊಳಪಟ್ಟು, ವಿಶೇಷ ನ್ಯಾಯಾಲಯವು ಯಾವುದೇ ಅಪರಾಧದ ಅಧಿವಿಚಾರಣೆಯ ಉದ್ದೇಶಕ್ಕಾಗಿ, ಸೆಷನ್ಸ್ ನ್ಯಾಯಾಲಯದ ಎಲ್ಲಾ ಅಧಿಕಾರಿಗಳನ್ನು ಹೊಂದಿರತಕ್ಕುದು ಮತ್ತು ಅಂಥ ಅಪರಾಧವನ್ನು, ಸೆಷನ್ಸ್ ನ್ಯಾಯಾಲಯದ ಮುಂದೆ ಅಧಿವಿಚಾರಣೆಗಾಗಿ ಸಂಹಿತೆಯಲ್ಲಿ ನಿಯಮಿಸಿದ ಪ್ರಕ್ರಿಯೆಗೆ ಅನುಸಾರರಾಗಿ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅದು ಸೆಷನ್ಸ್ ನ್ಯಾಯಾಲಯವಾಗಿದ್ದಿದ್ದರೆ ಹೇಗೋ ಹಾಗೆ ಅಧಿವಿಚಾರಣೆ ನಡೆಸತಕ್ಕದ್ದು.

**12. ಇತರ ಅಪರಾಧಗಳಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರ.**– (1) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಅಧಿವಿಚಾರಣೆ ನಡೆಸುವಾಗ, ವಿಶೇಷ ನ್ಯಾಯಾಲಯವು ಆ ಅಪರಾಧವು ಅಂಥದೇ ಬೇರೆ ಅಪರಾಧಕ್ಕೆ ಸಂಬಂಧಪಟ್ಟಿದ್ದರೆ ಯಾವ ಅಪರಾಧದ ಬಗ್ಗೆ ಆ ಆಪಾದಿತನನ್ನು ಸಂಹಿತೆಯ ಮೇರೆಗೆ ಆರೋಪಿಸಬಹುದೋ ಆ ಯಾವುದೇ ಇತರ ಅಪರಾಧವನ್ನು ಸಹ ಅಧಿವಿಚಾರಣೆ ಮಾಡಬಹುದು.

(2) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಯಾವುದೇ ಅಧಿವಿಚಾರಣೆಯ ಕಾಲದಲ್ಲಿ ಆ ಅಪರಾಧಿಯು ಈ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಯಾವುದೇ ಇತರ ಅಪರಾಧವನ್ನು ಮಾಡಿದ್ದಾನೆಂದು ನಿರ್ಣಯಿಸಿದರೆ, ವಿಶೇಷ ನ್ಯಾಯಾಲಯವು ಅಂಥ ವ್ಯಕ್ತಿಯನ್ನು ಅಂಥ ಇತರ ಅಪರಾಧಕ್ಕಾಗಿಯೂ ಸಹ ಅಪರಾಧಿಯೆಂದು ನಿರ್ಣಯಿಸಬಹುದು ಮತ್ತು ಅದರ ದಂಡನೆಗಾಗಿ ಈ ಅಧಿನಿಯಮದ ಅಥವಾ ಅಂಥ ಇತರ ಕಾನೂನಿನ ಮೂಲಕ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ಕೊಡಬಹುದು.

(3) ಪ್ರತಿಯೊಂದು ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿ ವ್ಯವಹರಣೆಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ನಡೆಸತಕ್ಕುದು ಮತ್ತು ವಿಶೇಷವಾಗಿ ಸಾಕ್ಷೀದಾರರ ಪರೀಕ್ಷೆಯು ಪ್ರಾರಂಭವಾಗಿರುವಲ್ಲಿ ಅದನ್ನು ಹಾಜರಿರುವ ಎಲ್ಲಾ ಸಾಕ್ಷೀದಾರರನ್ನು ಪರೀಕ್ಷಿಸುವವರೆಗೆ, ದಿವಸದಿಂದ ದಿವಸಕ್ಕೆ ಮುಂದುವರಿಸತಕ್ಕದ್ದು ಮತ್ತು ಯಾವುದೇ ವಿಶೇಷ ನ್ಯಾಯಾಲಯಕ್ಕೆ ಅದನ್ನು ಮುಂಬರುವ ದಿನಾಂಕವನ್ನು ಮೀರಿ ಮುಂದೂಡುವುದು ಅವಶ್ಯವೆಂದು ಕಂಡುಬಂದರೆ, ಅದು ಹಾಗೆ ಮಾಡಲು ತನಗಿರುವ ಕಾರಣಗಳನ್ನು ದಾಖಲು ಮಾಡತಕ್ಕದ್ದು.

**13. ನಿಧಿಗಳು ಅಥವಾ ಸ್ವತ್ತಿನ ಮುಟ್ಟುಗೋಲು.**– ಈ ಅಧಿನಿಯಮದ ಮೇರೆಗೆ ಒಬ್ಬ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸಲಾಗಿರುವಲ್ಲಿ ಅಂಥ ಅಪರಾಧವನ್ನು ಅಧಿವಿಚಾರಣೆ ಮಾಡುತ್ತಿರುವ ವಿಶೇಷ ನ್ಯಾಯಾಲಯವು, 8ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಿದ ಯಾವುವೇ ನಿಧಿಗಳು ಅಥವಾ ಸ್ವತ್ತನ್ನು ರಾಜ್ಯಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಘೋಷಿಸುವುದು ಅವಶ್ಯವೆಂದು ಪರ್ಯಾಲೋಚಿಸಿದರೆ ಹಾಗೆ ಮಾಡಬಹುದು.

**14. ಅಪೀಲು.**– (1) ಸಂಹಿತೆಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಂಗತಿಗಳು ಮತ್ತು ಕಾನೂನು– ಇವುಗಳಿಗೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯದ ವಾದಕಾಲೀನ ಆದೇಶವಾಗಿಲ್ಲದ ಯಾವುದೇ ತೀರ್ಪು, ಶಿಕ್ಷೆ ಅಥವಾ ಆದೇಶದ ವಿರುದ್ಧ ಅಪೀಲು ಸಲ್ಲಿಸಲು ಹಕ್ಕಿರತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಯಾವ ತೀರ್ಪು, ಶಿಕ್ಷೆ, ಆದೇಶದ ವಿರುದ್ಧ ಅಪೀಲನ್ನು ಮಾಡಿಕೊಳ್ಳಲಾಗಿದೆಯೋ ಆ ತೀರ್ಪು, ಶಿಕ್ಷೆ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು:

ಪರಂತು, ಮೂವತ್ತು ದಿವಸಗಳ ಅವಧಿಯೊಳಗೆ ಆ ಅಪೀಲನ್ನು ಸಲ್ಲಿಸದಿರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣವಿದ್ದಿತೆಂದು ಉಚ್ಚನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಮೂವತ್ತು ದಿವಸಗಳ ಸದರಿ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಪುರಸ್ಕರಿಸಬಹುದು.

## ಭಾಗ– V

### ಸಂಕೀರ್ಣ

**15. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ರಾಜ್ಯಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**16. ರುಜುವಾತಿನ ಭಾರ.**– 4ನೇ ಪ್ರಕರಣದ ಮೇರೆಗೆ ಒಂದು ಅಪರಾಧದ ಬಗ್ಗೆ ಯಾರೇ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡಿರುವಲ್ಲಿ, ಸದರಿ ಪ್ರಕರಣದ ಮೇರೆಗೆ ಆ ಅಪರಾಧವನ್ನು ತಾನು ಮಾಡಿಲ್ಲವೆಂದು ರುಜುವಾತು ಮಾಡುವ ಭಾರವು ಆ ವ್ಯಕ್ತಿಯ ಮೇಲೆ ಇರತಕ್ಕದ್ದು.

**17. ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವುದರ ಬಗ್ಗೆ ವರದಿ ಮಾಡಲು ಕೆಲವು ವ್ಯಕ್ತಿಗಳ ಬಾಧ್ಯತೆ.–** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಜಾರಿಯಲ್ಲಿ ಪೊಲೀಸರಿಗೆ ಸಹಾಯ ಮಾಡಬೇಕೆಂದು ಸರ್ಕಾರದ ಎಲ್ಲಾ ಅಧಿಕಾರಿಗಳನ್ನು ಈ ಮೂಲಕ ಅಗತ್ಯಪಡಿಸಲಾಗಿದೆ ಮತ್ತು ಶಕ್ತಗೊಳಿಸಲಾಗಿದೆ.

(2) ಎಲ್ಲಾ ಗ್ರಾಮ ಅಧಿಕಾರಿಗಳು ಮತ್ತು ಯಾವುದೇ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕಲೆಕ್ಟರ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಮತ್ತು ಅಂಥ ಪ್ರದೇಶದ ನಿವಾಸಿಗಳು ಆ ಪ್ರದೇಶದಲ್ಲಿ ಸತಿ ಹೋಗುವ ಸಂಭವವಿದೆ ಎಂದು ಅಥವಾ ಸತಿ ಹೋಗಿರುವುದಾಗಿ ಅವರಿಗೆ ನಂಬಲು ಕಾರಣವಿದ್ದರೆ ಅಥವಾ ಆ ಬಗ್ಗೆ ತಮಗೆ ಗೊತ್ತಿದ್ದರೆ ತಕ್ಷಣವೇ ಅಂಥ ಸಂಗತಿಯನ್ನು ಅತಿ ಸಮೀಪದ ಪೊಲೀಸು ಠಾಣೆಗೆ ವರದಿ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಯಾವುದೇ ಬಗೆಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**18. 4ನೇ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯು ಕೆಲವು ಸ್ವತ್ತುಗಳನ್ನು ಉತ್ತರಾಧಿಕಾರವಾಗಿ ಪಡೆಯಲು ಅನರ್ಹಗೊಳ್ಳತಕ್ಕದ್ದು.–** ಸತಿ ಹೋಗುವಿಕೆಗೆ ಸಂಬಂಧಪಟ್ಟಂತೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿರುವ ವ್ಯಕ್ತಿಯು ಯಾರಿಗೆ ಸಂಬಂಧಿಸಿದಂತೆ ಹಾಗೆ ಸತಿ ಹೋಗಲಾಗಿದೆಯೋ ಆ ವ್ಯಕ್ತಿಯ ಸ್ವತ್ತನ್ನು ಅಥವಾ ಯಾರಿಗೆ ಸಂಬಂಧಿಸಿದಂತೆ ಹಾಗೆ ಸತಿ ಹೋಗಲಾಗಿದೆಯೋ ಆ ವ್ಯಕ್ತಿಯು ಮರಣ ಹೊಂದಿದ ಮೇಲೆ ಅವನು ಉತ್ತರಾಧಿಕಾರವಾಗಿ ಪಡೆಯಲು ಹಕ್ಕುಳ್ಳವನಾಗಿರಬಹುದಾಗಿದ್ದಂಥ ಯಾವನೇ ಇತರ ವ್ಯಕಿತ್ತಿಯ ಸ್ವತ್ತನ್ನು ಉತ್ತರಾಧಿಕಾರವಾಗಿ ಪಡೆಯಲು ಅನರ್ಹಗೊಳ್ಳತಕ್ಕದ್ದು.

**19. 1951ರ ಅಧಿನಿಯಮ 43ರ ತಿದ್ದುಪಡಿ.–** ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ಇದರಲ್ಲಿ,–

(ಎ) 8ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಪರಂತುಕದ ತರುವಾಯ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತೂ ಪರಂತು, ಸತಿಹೋಗುವಿಕೆಯನ್ನು (ಪ್ರತಿಬಂಧಿಸುವ) ಅಧಿನಿಯಮ, 1987– ಇದರ ಯಾವುದೇ ಉಪಬಂಧದ ಉಲ್ಲಂಘನೆಗಾಗಿ ವಿಶೇಷ ನ್ಯಾಯಾಲಯದ ಮೂಲಕ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕುದು ಮತ್ತು ಅವನ ಬಿಡುಗಡೆಯಾದಂದಿನಿಂದ ಐದು ವರ್ಷಗಳ ಇನ್ನೂ ಹೆಚ್ಚಿನ ಅವಧಿಯವರೆಗೆ ಅನರ್ಹಗೊಂಡಿರುವುದು ಮುಂದುವರಿಯತಕ್ಕದ್ದು."

(ಬಿ) 123ನೇ ಪ್ರಕರಣದಲ್ಲಿ, (3ಎ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(3) ಯಾರೇ ಅಭ್ಯರ್ಥಿಯು ಅಥವಾ ಏಜೆಂಟನು ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಯ ಈಡೇರಿಕೆಗಾಗಿ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವುದಕ್ಕಾಗಿ ಸತಿಯ ಆಚರಣೆ ಅಥವಾ ಸತಿ ಹೋಗುವಿಕೆಯನ್ನು ಪ್ರಸಾರಗೊಳಿಸುವುದು ಅಥವಾ ಅದನ್ನು ಮಹತ್ವೀಕರಿಸುವುದು."

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ, "ಸತಿ" ಮತ್ತು ಸತಿಗೆ ಸಂಬಂಧಪಟ್ಟಂತೆ "ಮಹತ್ವೀಕರಣ" ಎಂಬುವು ಅವುಗಳಿಗೆ ಸತಿ ಹೋಗುವಿಕೆಯನ್ನು (ಪ್ರತಿಬಂಧಿಸುವ) ಅಧಿನಿಯಮ, 1987– ಇದರಲ್ಲಿ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**20. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರತಕ್ಕದ್ದು.–** ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ಯಾವುದೇ ನಿಯಮ ಅಥವಾ ಆದೇಶವು, ಈ ಅಧಿನಿಯಮವನ್ನು ಹೊರತುಪಡಿಸಿ ಇತರ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಅಧಿನಿಯಮಿತಿಯ ಕಾರಣದಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾಗಿರುವುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮವನ್ನು ಹೊಂದಿರತಕ್ಕದ್ದು.

**21. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ

ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**22. ಅಸ್ತಿತ್ವದಲ್ಲಿರುವ ಕಾನೂನುಗಳ ನಿರಸನ.-** (1) ಸತಿ ಹೋಗುವುದರ ಪ್ರತಿಬಂಧ ಅಥವಾ ಅದರ ಮಹತ್ವೀಕರಣವನ್ನು ಉಪಬಂಧಿಸುವಂಥ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಎಲ್ಲಾ ಕಾನೂನುಗಳು ಹಾಗೆ ಪ್ರಾರಂಭವಾದ ಮೇಲೆ ನಿರಸನಗೊಳ್ಳತಕ್ಕದ್ದು.

(2) ಹಾಗೆ ನಿರಸನಗೊಂಡಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ನಿರಸನಗೊಂಡ ಯಾವುದೇ ಕಾನೂನಿನ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು ಮತ್ತು ವಿಶೇಷವಾಗಿ ಹಾಗೆ ನಿರಸನಗೊಂಡ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ವಿಶೇಷ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಂಡಿರುವ ಮತ್ತು ಆ ರಾಜ್ಯದಲ್ಲಿ ಈ ಅಧಿನಿಯಮದ ನಿಕಟ ಪ್ರಾರಂಭಕ್ಕೆ ಮುಂಚೆ ಅದರ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣದೊಂದಿಗೆ ಆ ವಿಶೇಷ ನ್ಯಾಯಾಲಯವು ಹಾಗೆ ಪ್ರಾರಂಭವಾದ ತರುವಾಯ ಅಂಥ ವಿಶೇಷ ನ್ಯಾಯಾಲಯವನ್ನು ಈ ಅಧಿನಿಯಮದ 9ನೇ ಪ್ರಕರಣದ ಮೇರೆಗೆ ರಚಿಸಿದ್ದಿದ್ದರೆ ಹೇಗೋ ಹಾಗೇ ವ್ಯವಹರಿಸುವುದು ಮುಂದುವರಿಸತಕ್ಕದ್ದು.

* * * *